ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

**"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ**
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಕರಾಮಾನಿಮಂ/13/ಎಲ್.ಜಿ.ಎಂ/2014 2937 ದಿನಾಂಕ: 28 AUG 2014

## ಜ್ಞಾಪನಾ ಪತ್ರ

ವಿಷಯ:- ನ್ಯಾಶನಲ್ ಗ್ರೀನ್ ಟ್ರಿಬ್ಯೂನಲ್(NGT) ಮುಂದೆ ಹಾಜರಾಗುವ ವಕೀಲರ ಸಂಭಾವನೆಯನ್ನು ನಿಗಧಿಪಡಿಸುವ ಬಗ್ಗೆ.

**ಉಲ್ಲೇಖ:-ದಿನಾಂಕ 25-6-2014 ರಂದು ನಡೆದ** ಮಂಡಳಿಯ 192 ನೇ ಸಭೆಯ ನಿರ್ಣಯ

ನ್ಯಾಶನಲ್ ಗ್ರೀನ್ ಟ್ರಿಬ್ಯೂನಲ್ ಕಾಯ್ದೆಯ ಕಲಂ 10 ರ ಪ್ರಕಾರ ಸ್ಥಾಪಿತವಾಗಿರುವ ಚೆನ್ನೈ ನವದೆಹಲಿಯ ಪೀಠಗಳಲ್ಲಿ ಪರಿಸರ ಸಂರಕ್ಷಣಾ ಕಾಯ್ದೆಯ 1986ರ ಉಲ್ಲಂಘನೆಯನ್ನು ಮತ್ತು ಜಲಕಾಯ್ದೆ 1974ರಡಿ ನೀಡುವ ಮುಚ್ಚುವ ಆದೇಶವನ್ನು ಹಾಗೂ ಅಪೀಲೆಟ್ ಅಥಾರಿಟಿಯ ಆದೇಶವನ್ನು ಪ್ರಶ್ನಿಸಲಾಗುತಿದ್ದು, ಸದರಿ ಪ್ರಕರಣಗಳಲ್ಲಿ ಮಂಡಳಿಯ ಪರವಾಗಿ ಹಾಜರಾಗಲು ವಕೀಲರನ್ನು ನೇಮಿಸಲಾಗುತ್ತದೆ.

ಮಂಡಳಿ ಪರವಾಗಿ NGT ಯಲ್ಲಿ ಹಾಜರಾಗುತ್ತಿರುವ ವಕೀಲರ ಸಂಭಾವನೆಯ ಬಗ್ಗೆ ಮಂಡಳಿಯ 192 ನೇ ದೀರ್ಘವಾಗಿ ಚರ್ಚಿಸಿ, ಗ್ರೀನ್ ಟ್ರಿಬ್ಯೂನಲ್‌ನಲ್ಲಿ ಮಂಡಳಿ ಪರವಾಗಿ ಹಾಜರಾಗುತ್ತಿರುವ ಹಿರಿಯ ವಕೀಲರ ಹಾಗೂ ಕೆಲವು ಕ್ಲಿಷ್ಟಕರವಾದ ಹಾಗೂ ಸೂಕ್ಷ್ಮವಾದ ಪ್ರಕರಣಗಳಲ್ಲಿ ಹಾಜರಾಗುತ್ತಿರುವ ವಕೀಲರ ಫೀ ಸಂಭಾವನೆಯ ಬಗ್ಗೆ ನಿರ್ಣಯಿಸಿದ್ದು ತತ್ಸಬಂಧ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

## ಆದೇಶ

1. ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್ ಮುಂದೆ ಮಂಡಳಿಯ ಪರವಾಗಿ ಹಾಜರಾಗಲಿರುವ ವಕೀಲರುಗಳಿಗೆ ಪ್ರತಿ ಹಿಯರಿಂಗ್‌ಗೆ ರೂ. 5,000/- (ಐದು ಸಾವಿರ ರೂಪಾಯಿಗಳು ಮಾತ್ರ) ಸಂಭಾವನೆ ಮತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಡ್ರಾಫ್ಟಿಂಗ್ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸುವುದು.

2. ಹಿರಿಯ ವಕೀಲರುಗಳನ್ನು ನೇಮಿಸುವಾಗ ಪ್ರಕರಣಕ್ಕೆ ಅನುಗುಣವಾಗಿ ಗರಿಷ್ಠ ರೂ. 25,000/- (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಪ್ರತಿ ಹಿಯರಿಂಗ್‌ನ ಸಂಭಾವನೆಯಾಗಿ ಪಾವತಿಸುವುದು.

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ" AVOID USE OF PLASTICS- BE 'ECO' FRIENDLY

ಒಂದು ವೇಳೆ ಹಿರಿಯ ವಕೀಲರುಗಳನ್ನು ನೇಮಿಸುವಾಗ ಪ್ರತಿ ಹಿಯರಿಂಗ್‌ಗೆ ಫೀ ಸಂಭಾವನೆಯಾಗಿ ರೂ. 25.000/- (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಕ್ಕಿಂತ ಹೆಚ್ಚಿನ ಮೊತ್ತದ

ಸಂಭಾವನೆಯನ್ನು ಪಾವತಿಸಬೇಕಾದಲ್ಲಿ ಮಂಡಳಿ ಅಧ್ಯಕ್ಷರ ಅನುಮೋದನೆ ಪಡೆದು, ಪಾವತಿಸಿ ನಂತರ ಘಟನೋತ್ತರ ಮಂಜೂರಾತಿ ಅನುಮೋದನೆಗಾಗಿ ಮಂಡಳಿಗೆ ಪ್ರಸ್ತಾವನೆ ಮಂಡಿಸುವುದು.

ಸದರಿ ಆದೇಶವು ತಕ್ಷಣದಿಂದ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಇವರಿಗೆ,

1. ಮುಖ್ಯ ಹಣಕಾಸು ಅಧಿಕಾರಿಗಳರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ
2. ಮುಖ್ಯ ಆಡಳಿತಾಧಿಕಾರಿಯವರ ಮಾಹಿತಿಗಾಗಿ
3. ಮುಖ್ಯ ಪರಿಸರ ಅದಿಕಾರಿಗಳ ಮಾಹಿತಿಗಾಗಿ
4. ಎಲ್ಲಾ ವಲಯ ಹಿರಿಯ ಪರಿಸರ ಅದಿಕಾರಿಗಳ ಮಾಹಿತಿಗಾಗಿ
5. ಎಲ್ಲಾ ಪ್ರಾದೇಶಿಕ ಅಧಿಕಾರಿಗಳ ಮಾಹಿತಿಗಾಗಿ
6. ಅಧ್ಯಕ್ಷರ ತಾಂತ್ರಿಕ ಅಧಿಕಾರಿಗಳ ಮಾಹಿತಿಗಾಗಿ
7. ಸದಸ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರ ಮಾಹಿತಿಗಾಗೆ.